ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 04, ಭೂತರಾಮನಹಟ್ಟಿ, ಬೆಳಗಾವಿ – 591156
(ನ್ಯಾಕ್ ಮಾನ್ಯತೆ : B+ ಗ್ರೇಡ್ – 2021)

RANI CHANNAMMA UNIVERSITY
Vidyasangama, National Highway – 04, Bhootaramanahatti, Belagavi – 591156
(NAAC Accredited with B+ Grade - 2021)
ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ
SCHOOL OF CLASSICAL KANNADA STUDIES
E-mail: rcukannada@gmail.com
Website : www.rcub.ac.in

**ಕ್ರ. ಸಂ. :** ರಾಚವಿ/ಬೆಳಗಾವಿ/ಶಾ.ಕ.ಭಾ.ಅ.ಸಂ./2026-27/ 477

**ದಿನಾಂಕ :** 06.07.2026

## ಕನ್ನಡ ವಿಷಯದ ಪಿಎಚ್.ಡಿ ಆಯ್ಕೆಯ ಭಾಗವಾಗಿ ನಡೆಸುವ ಮೌಖಿಕ (ಸಂದರ್ಶನ) ಪರೀಕ್ಷೆಯ ವೇಳಾಪಟ್ಟಿ

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆಯ ಪಿಎಚ್.ಡಿ. ಅಭ್ಯರ್ಥಿಗಳಾದ ತಾವು ಪಿಎಚ್.ಡಿ ಅಧ್ಯಯನಕ್ಕೆ ಅರ್ಜಿ ಸಲ್ಲಿಸಿ ಮೌಖಿಕ ಪರೀಕ್ಷೆಗೆ ಅರ್ಹತೆ ಪಡೆದ (ಜೆಆರ್‌ಎಫ್/ನೆಟ್/ಸ್ಲೆಟ್ ಹಾಗೂ ವಿಶ್ವವಿದ್ಯಾಲಯವು ನಡೆಸಿದ ಪ್ರವೇಶ ಪರೀಕ್ಷೆಯಲ್ಲಿ 40 ಹಾಗೂ ಅದಕ್ಕಿಂತ ಹೆಚ್ಚು ಅಂಕಗಳಿಸಿದ) ಅಭ್ಯರ್ಥಿಗಳ ಮೌಖಿಕ (ಸಂದರ್ಶನ) ಪರೀಕ್ಷೆಯನ್ನು ವಿಶ್ವವಿದ್ಯಾಲಯದ ಪಿಎಚ್.ಡಿ ನಿಯಮಾವಳಿಗಳ ಪ್ರಕಾರ ನಡೆಸಲಾಗುವುದು. ಸದರಿ ಮೌಖಿಕ (ಸಂದರ್ಶನಕ್ಕೆ) ಪರೀಕ್ಷೆಗೆ ಬರುವ ಅಭ್ಯರ್ಥಿಗಳು ಎಲ್ಲ ಶೈಕ್ಷಣಿಕ ಮೂಲ ದಾಖಲೆಗಳು, ಜಾತಿ-ಆದಾಯ ಪ್ರಮಾಣ ಪತ್ರ, ಆಧಾರ್ ಹಾಗೂ ಇತರೆ ಅಗತ್ಯವಿರುವ ಮೂಲ ದಾಖಲೆ ಮತ್ತು ಒಂದು ಸೆಟ್ ಝರಾಕ್ಸ್ ಪ್ರತಿಗಳನ್ನು ಸ್ವಯಂ ದೃಢೀಕರಿಸಿಕೊಂಡು ಹಾಜರಿರಲು ಈ ಮೂಲಕ ತಿಳಿಸಿದೆ. ಸದರಿ ಮೌಖಿಕ (ಸಂದರ್ಶನ) ಪರೀಕ್ಷೆಯು ದಿನಾಂಕ : 09.07.2026 ರಂದು ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆಯಲ್ಲಿ ಬೆಳಗಿನ 10.00 ಘಂಟೆಯಿಂದ ನಡೆಯಲಿದೆ. ಅದರ ವೇಳಾಪಟ್ಟಿಯು ಈ ಮುಂದಿನಂತಿದೆ.

| ಕ್ರ. ಸಂ. | ಸಂದರ್ಶನದ ವಿವರಗಳು | ದಿನಾಂಕ |
|---|---|---|
| 1 | ವಿಶ್ವವಿದ್ಯಾಲಯವು ನಡೆಸಿದ ಪಿಚ್.ಡಿ. ಪ್ರವೇಶ ಪರೀಕ್ಷೆಯಲ್ಲಿ ಅರ್ಹತೆ ಪಡೆದುಕೊಂಡ ಪಿಚ್.ಡಿ. ಅಭ್ಯರ್ಥಿಗಳು ಹಾಗೂ ಜೆಆರ್‌ಎಫ್/ನೆಟ್/ಸ್ಲೆಟ್/ಕೆ-ಸೆಟ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು | 09.07.2026 ರಂದು ಮುಂಜಾನೆ : 10.00 ಗಂಟೆಯಿಂದ |

ಅಭ್ಯರ್ಥಿಯು ಸರ್ಕಾರಿ ನೌಕರರಾಗಿದ್ದಲ್ಲಿ ಸಕ್ಷಮ ನೇಮಕಾತಿ ಪ್ರಾಧಿಕಾರದಿಂದ ಮೌಖಿಕ ಪರೀಕ್ಷೆಗೆ ಹಾಜರಾಗುವ ಕುರಿತು ಹಾಗೂ ಪಿಎಚ್.ಡಿ ಅಧ್ಯಯನ ನಡೆಸಲು ಅನುಮತಿ ಕುರಿತು ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಸಂದರ್ಶನದ ಸಮಯದಲ್ಲಿ ಹಾಜರುಪಡಿಸುವುದು. ಖಾಸಗಿ ಆಡಳಿತ ಮಂಡಳಿಗಳಲ್ಲಿ ನೌಕರರಾಗಿ ನೇಮಕವಾಗಿದ್ದ ಸಂದರ್ಭದಲ್ಲಿ ಆಡಳಿತ ಮಂಡಳಿಯ ಕಾರ್ಯದರ್ಶಿಗಳಿಂದ "ಸದರಿಯವರು ನಮ್ಮಲ್ಲಿ ಖಾಯಂ ಹಾಗೂ ಪೂರ್ಣಕಾಲಿಕ ನೌಕರರಾಗಿದ್ದು ಅವರ ಪಿಎಚ್.ಡಿ ಅಧ್ಯಯನಕ್ಕೆ ಎಲ್ಲಾ ರೀತಿಯ ಸಹಕಾರವನ್ನು ನೀಡಲಾಗುವುದೆಂದು ಅಲ್ಲದೇ, ಕೋರ್ಸ ವರ್ಕ್ ಸಂದರ್ಭದಲ್ಲಿ ಅಭ್ಯರ್ಥಿಯನ್ನು ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆಗೆ ಬಿಟ್ಟುಕೊಡಲು ಒಪ್ಪಿಗೆ ಇದೆ ಎನ್ನುವ "ವಿಷಯವುಳ್ಳ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಹಾಜರುಪಡಿಸಲು ಈ ಮೂಲಕ ತಿಳಿಸಿದೆ.

ಅಭ್ಯರ್ಥಿಗಳು ಮೌಖಿಕ ಪರೀಕ್ಷೆಗೆ ಹಾಜರಾಗುವುದಕ್ಕೆ ವಿಶ್ವವಿದ್ಯಾಲಯ / ಅಧ್ಯಯನ ಸಂಸ್ಥೆಯಿಂದ ಪ್ರಯಾಣ ಭತ್ಯೆ / ದಿನ ಭತ್ಯೆ ಮತ್ತು ಇತರೆ ಯಾವುದೇ ಭತ್ಯೆ ಮತ್ತು ಇತರೆ ಸೌಲಭ್ಯಗಳನ್ನು ನೀಡಲಾಗುವುದಿಲ್ಲ. ಸಂದರ್ಶನದ ವೇಳಾಪಟ್ಟಿ ತಿದ್ದುಪಡಿಗೊಳಪಟ್ಟಿರುತ್ತದೆ. ಅಭ್ಯರ್ಥಿಗಳು ಬಾಹ್ಯ ಹಾಗೂ ಆಂತರಿಕ ಪ್ರಭಾವ ಮತ್ತು ಒತ್ತಡಗಳನ್ನು ತಂದಲ್ಲಿ ಅಭ್ಯರ್ಥಿತನವನ್ನು ಅನರ್ಹಗೊಳಿಸಲಾಗುವುದು ಎಂಬುವುದನ್ನು ಈ ಮೂಲಕ ತಮ್ಮ ಗಮನಕ್ಕೆ ತರಲಾಗಿದೆ.

ಅಧ್ಯಕ್ಷರು
ಅಧ್ಯಕ್ಷರು
ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ